**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ,**
**ದ.ಕ., ಮಂಗಳೂರು.**

| | | |
|---|---|---|
| | **ಎಸ್.ಸಿ.ನಂ.55/2016 ಮತ್ತು 161/2021** | |
| | ಪ್ರಾ.ಸಾ.02 | ಚಾ.ಸಾ.02 |

| | |
|---|---|
| ಸಾಕ್ಷಿದಾರರ ಹೆಸರು | ಆನಂದ |
| ತಂದೆಯ ಹೆಸರು | ಗಣೇಶ ಗೌಡ |
| ಪ್ರಾಯ | 35 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ತಿರುಮಲಾಪುರ ಗ್ರಾಮ, ಬೈಲುಕುಪ್ಪೆ ಅಂಚೆ, ಹಾರ್ನಳ್ಳಿ ಹೋಬಳಿ, ಪಿರಿಯಾಪಟ್ಟಣ ತಾಲೂಕು, ಮೈಸೂರು ಜಿಲ್ಲೆ. |
| ದಿನಾಂಕ | **03.06.2023** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು. |

**ಮುಖ್ಯವಿಚಾರಣೆಃ ಸರಕಾರಿ ಅಭಿಯೋಜಕರಿಂದ.**

2015 ರಲ್ಲಿ ನಾನು ಮಂಗಳೂರಿನ ಕದ್ರಿ ಠಾಣೆಯ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ವಿಚಾರಣಾ ಖೈದಿಯಾಗಿ ಇದ್ದೆ. ಚಾಸಾ-3 ರಿಂದ ಚಾಸಾ-8 ರವರುಗಳು ವಿಚಾರಣಾ ಖೈದಿಗಳಾಗಿ ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿದ್ದ ಕಾರಣ ನನಗೆ ಪರಿಚಯವಿರುತ್ತಾರೆ. ಪ್ರಕರಣದ ಆರೋಪಿಗಳು ನೋಡಿ ಪರಿಚಯವಿರುತ್ತಾರೆ. ಆರೋಪಿಗಳಲ್ಲಿ ಕೆಲವರು ನಮ್ಮ ಸೆಲ್‌ನಲ್ಲಿ ಇದ್ದರು, ಕೆಲವರು ಪಕ್ಕದ ಸೆಲ್‌ನಲ್ಲಿದ್ದರು. ನಾನು ಹಳೆಯ ಜೈಲಿನ 1 ನೇ ನಂಬರ್ ಸೆಲ್‌ನಲ್ಲಿ ಇದ್ದೆ. ನನ್ನ ಸೆಲ್‌ನಲ್ಲಿ ಮುನೀರ್, ಇಕ್ಬಾಲ್ ಮತ್ತು ಚಿಕ್ಕ ಇಕ್ಬಾಲ್ ಇದ್ದರು. ಮಾಡೂರು ಯುಸೂಫ 5 ನೇ ಸೆಲ್‌ನಲ್ಲಿ ಹಾಗೂ ಗಣೇಶ್ ಶೆಟ್ಟಿ 4 ನೇ ಸೆಲ್‌ನಲ್ಲಿ ಇದ್ದರು. ಮಂಗಳೂರು ಕಾರಾಗೃಹದಲ್ಲಿ ಕ್ವಾರಂಟೈನ್ ವಿಭಾಗ ಹಾಗೂ ಬೇರೆ ವಿಭಾಗ ಸಹ ಇರುತ್ತದೆ. ಕಾರಾಗೃಹದಲ್ಲಿ ಎರಡು ಕೊಲೆಗಳು ಆದ ಬಗ್ಗೆ ನನಗೆ ಮಾಹಿತಿ ಇರುತ್ತದೆ.

2. ಜೈಲಿನಲ್ಲಿ ಕೊಲೆಯಾಗುವ 15 ದಿನಗಳ ಮುಂಚೆ ಮಾಡೂರು ಯುಸೂಫ ಮತ್ತು ಕ್ವಾರಂಟೈನ್ ವಿಭಾಗದ ಶರಣ್ ರವರ ನಡುವೆ ಗಲಾಟೆ ನಡೆಯುತ್ತಿತ್ತು. ಮಾಡೂರು ಯುಸೂಫ

ಮತ್ತು ಶರಣ್ ಅವರ ಭಾಷೆಯಲ್ಲಿ ಪರಸ್ಪರ ಬೈದಾಡಿಕೊಳ್ಳುತ್ತಿದ್ದರು. ಕ್ವಾರಂಟೈನ್ ವಿಭಾಗದವರು ಬಾವಿಯ ಬಳಿ ಸ್ನಾನ ಮಾಡಲು ಬಂದಾಗ ಮಾಡೂರು ಯುಸೂಫ ಅವರಿಗೆ ಬೈಯುತ್ತಿದ್ದ. ಕ್ವಾರಂಟೈನ್ ವಿಭಾಗದವರು ಮಾಡೂರು ಯುಸೂಫನಿಗೆ ಬೈಯುತ್ತಿದ್ದರು. ಈ ರೀತಿ ಜೈಲಿನಲ್ಲಿ ಜಗಳ ನಡೆದುಕೊಂಡು ಬರುತ್ತಿತ್ತು. ನಮ್ಮ ಸೆಲ್‌ನಲ್ಲಿದ್ದ ಮುನೀರ್ ಮತ್ತು ಇಕ್ಬಾಲ್ ನಮ್ಮ ಸೆಲ್ ನಲ್ಲಿದ್ದ ಬೇರೆ ಖೈದಿಗಳ ಜೊತೆ ಜಗಳ ಮಾಡುತ್ತಿದ್ದರು. ಜೈಲಿನವರು ಬಂದು ಅವರಿಗೆ ಎಚ್ಚರಿಕೆ ನೀಡಿ ಹೋಗಿದ್ದರು.

3. 2015 ರ ನವಂಬರ್ ತಿಂಗಳ 1 ನೇ ತಾರಿಖಿನಂದು ಮುನೀರ್ ಮತ್ತು ಇಕ್ಬಾಲ್ ಕೇರಮ್ ಬೊರ್ಡನ್ನು ಮುರಿದು, ಮುರಿದ ಮರವನ್ನು ರಾತ್ರಿ ಜೋಡಿಸುತ್ತಿದ್ದರು. ಮರುದಿನ ಬೆಳಿಗ್ಗೆ 07.30 ಗಂಟೆಗೆ ನಾವು ಸೆಲ್‌ನಲ್ಲಿ ಮಲಗಿದ್ದೆವು. ಇಕ್ಬಾಲ್ ಆಗ ಸೆಲ್‌ನಿಂದ ಹೊರಗೆ ಇದ್ದ. ಇಕ್ಬಾಲ್ ಕಾಕನನ್ನು ಕೊಂದರಲ್ಲ ಎಂದು ಕೂಗಿಕೊಂಡು ಓಡಿ ಬಂದ. ಆಗ ಸೆಲ್‌ನ ಒಳಗಿದ್ದ ಮುನೀರ್, ಇರ್ಷದ್, ಚೋಟಾ ಇಕ್ಬಾಲ್ ಇವರುಗಳು ಮೂಲೆಯಲ್ಲಿ ಒಬ್ಬರ ಮೇಲೊಬ್ಬರು ಹತ್ತಿಕೊಂಡು ಸೂರಿನ ಹಂಚನ್ನು ಹಾಗೂ ಅಡ್ಡ ಇದ್ದ ರೀಪನ್ನು ಒಡೆದು ಹೊರಗೆ ಬಂದರು. ಒಬ್ಬ ಖೈದಿ ರಾಡ್ ನಿಂದ ನಮ್ಮ ರೂಮಿನ ಬೀಗ ಒಡೆದ, ಅವನ ಹೆಸರು ನನಗೆ ಗೊತ್ತಿಲ್ಲ. ಮುನೀರ್, ಚೋಟಾ ಇಕ್ಬಾಲ್ ಮತ್ತು ಇತರರು ನನ್ನನ್ನು ಹಿಡಿದುಕೊಂಡು ಗಣೇಶ ಶೆಟ್ಟಿ ಸೆಲ್‌ಗೆ ಎಳೆದುಕೊಂಡು ಹೋದರು.

4. ಗಣೇಶ ಶೆಟ್ಟಿ ಸೆಲ್‌ನಲ್ಲಿ ಕೆಳಗೆ ಬಿದ್ದಿದ್ದರು. ನಫಾಟೆ ರಫೀಕ್ ಮತ್ತು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಗಳು ರೀಪರ್, ದೊಣ್ಣೆ ಹಾಗೂ ರಾಡಿನಲ್ಲಿ ಗಣೇಶ್ ಶೆಟ್ಟಿಗೆ ಹೊಡೆಯುತ್ತಿದ್ದರು. ಒಬ್ಬ ಮುಸ್ಲಿಂ ಸಾಯಿಸಿದ್ದೀರಿ, ಇಬ್ಬರು ಹಿಂದೂಗಳು ಬೇಕು ಎಂದು ಹೊಡೆಯುತ್ತಿದ್ದರು. ನನ್ನನ್ನು ಗಣೇಶ ಶೆಟ್ಟಿಯ ಸೆಲ್‌ಗೆ ಕರೆದುಕೊಂಡು ಹೋಗಿ ಹೊಡೆಯುತ್ತಿದ್ದರು.

ನಫಾಟೆ ರಫೀಕ ಇವನನ್ನು ಯಾಕೆ ಕರೆದುಕೊಂಡು ಬಂದಿದ್ದೀರಿ ಎಂದು ಅಲ್ಲಿದ್ದವರನ್ನು ಕೇಳಿದ. ನಫಾಟೆ ರಫೀಕ ನನ್ನನ್ನು ಬಿಡಲು ಹೇಳಿದ. ನನ್ನನ್ನು ಮುನೀರ್ ಮತ್ತು ಚೋಟಾ ಇಕ್ಬಾಲ್ ಹಿಡಿದುಕೊಂಡಿದ್ದರು. ಮುನೀರ್ ನನ್ನನ್ನು ಬಿಟ್ಟ. ಮುನೀರ್ ಗಣೇಶ ಶೆಟ್ಟಿಯ ಎದೆ ಮುಟ್ಟಿ ನೋಡಿದ. ಗಣೇಶ ಶೆಟ್ಟಿ ಉಸಿರಾಡುತ್ತಿದ್ದಾನೆ ಸತ್ತಿಲ್ಲ ಎಂದು ಹೇಳಿ, ಕೈ ಗಾತ್ರದ ದೊಣ್ಣೆ ತೆಗೆದುಕೊಂಡು ಗಣೇಶ ಶೆಟ್ಟಿಯ ತಲೆಗೆ ಹೊಡೆದ. ಗಣೇಶ ಶೆಟ್ಟಿಯ ತಲೆಯಿಂದ ರಕ್ತ ಅಲ್ಲಿದ್ದವರ ಮೇಲೆಲ್ಲ ಹಾರಿತು.

5. ಅಲ್ಲಿದ್ದ ವಿಜಯ, ಕತ್ತಿ ಮುಸ್ತಫಾ ಮತ್ತು ಧರ್ಮಸ್ಥಳದ ಗೌಡರು ನೀನು ಇಲ್ಲೇ ಇದ್ದರೇ ಹೊಡೆದು ಹಾಕುತ್ತಾರೆ ಬಾ ಎಂದು ನನ್ನನ್ನು ಬಾವಿ ಕಡೆಗೆ ಕರೆದುಕೊಂಡು ಹೋಗಿ ನನ್ನನ್ನು ಅಲ್ಲಿ ಅಡಗಿ ಕುಳಿತುಕೊಳ್ಳುವಂತೆ ಹೇಳಿದರು. ನಂತರ ಒಂದು ಗಂಟೆಯ ಅವಧಿಯಲ್ಲಿ ಪೊಲೀಸರು ಅಲ್ಲಿಗೆ ಬಂದರು. ನಾವು ಕಾಪಾಡಿ ಎಂದು ಕೂಗಿಕೊಂಡು ಪೊಲೀಸರ ಬಳಿ ಹೋದೆವು. ಪೊಲೀಸರು ನಮ್ಮನ್ನು ಆ ಸ್ಥಳದಿಂದ ಅಧೀಕ್ಷಕರ ಕಚೇರಿಯ ಬಳಿ ಕರೆದುಕೊಂಡು ಹೋದರು. ಆ ದಿನ ರಾತ್ರಿ ನಮ್ಮನ್ನು ಬಾವಿ ಪಕ್ಕದ ಸೆಲ್‌ಗೆ ಹಾಕಿದರು. ಸಾಕ್ಷಿ ಮುಂದುವರೆದು ಅದು 6 ನೇ ನಂಬರ್ ಸೆಲ್ ಎಂದು ನುಡಿಯುತ್ತಾರೆ.

6. ಗಣೇಶ್ ಶೆಟ್ಟಿಯನ್ನು ನನ್ನ ಎದುರಿಗೆ ಸಾಯಿಸಲಾಗಿತ್ತು. ಗಣೇಶ ಶೆಟ್ಟಿಯನ್ನು ಮುನೀರ್, ಇಕ್ಬಾಲ್, ಸಣ್ಣ ಇಕ್ಬಾಲ್, ನಫಾಟೆ ರಫೀಕ್ ಮತ್ತು ಇತರರು ಸಾಯಿಸಿರುತ್ತಾರೆ. ನ್ಯಾಯಾಲಯದ ಮುಂದೆ ಈ ದಿನ ಹಾಜರಿರುವ ಆರೋಪಿಗಳು ಗಣೇಶ ಶೆಟ್ಟಿಯನ್ನು ಹಲ್ಲೆ ಮಾಡುವಾಗ ಇದ್ದರು. ಅವರುಗಳ ಕೈಯಲ್ಲಿ ಕೇರಮ್ ಬೋರ್ಡ್, ರೀಪರ್, ದೊಣ್ಣೆಗಳು ಮತ್ತು ಕಬ್ಬಿಣದ ರಾಡ್ ಇದ್ದವು. 8 ನೇ ತಾರಿಖಿನಂದು ಪೊಲೀಸರು ನನ್ನನ್ನು ವಿಚಾರಿಸಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. 9 ನೇ ತಾರಿಖಿನಂದು ಪೊಲೀಸರು ನನ್ನನ್ನು ಮಹಿಳಾ ನ್ಯಾಯಾಧೀಶರ ಮುಂದೆ ಹಾಜರುಪಡಿಸಿರುತ್ತಾರೆ.

ನ್ಯಾಯಾಧೀಶರು ನನ್ನನ್ನು ಘಟನೆಯ ಬಗ್ಗೆ ಕೇಳಿದರು. ನಾನು ಘಟನೆಯ ಬಗ್ಗೆ ಹೇಳಿರುತ್ತೇನೆ.

7. ಈ ವೇಳೆಗೆ ಬಿಳಿಯ ಕವರಿನಲ್ಲಿ ಸೀಲ್ ಮಾಡಲಾದ ಮಂಗಳೂರಿನ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು JMFC ರವರು ಬರ್ಕೆ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ 92/2015 ರಲ್ಲಿ ಸಲ್ಲಿಸಿರುವ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರ ಹೇಳಿಕೆ ಎಂದು ನಮೂದಾಗಿರುವ ಒಂದು ಕವರನ್ನು ಮಾನ್ಯ ಅಭಿಯೋಜಕರು, ಆರೋಪಿಗಳು ಮತ್ತು ಮಾನ್ಯ ಆರೋಪಿಗಳ ಪರ ವಕೀಲರ ಸಮಕ್ಷಮ ತೆರೆಯಲಾಯಿತು. ತೆರೆದು ನೋಡಲಾಗಿ, ದಿನಾಂಕ 11.11.2015 ರ ಆದೇಶ ಪುಟದ ದೃಢೀಕೃತ ನಕಲಿನ ಜೊತೆಗೆ ಮಂಗಳೂರಿನ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು JMFC ರವರು ಮಂಗಳೂರಿನ 3 ನೇ JMFC ನ್ಯಾಯಾಲಯಕ್ಕೆ ಸಾಕ್ಷಿಗಳಾದ ಚಾಸಾ-2/ಆನಂದ್, ಚಾಸಾ-3/ಮಹಮ್ಮದ್ ಮುಸ್ತಫಾ ಮತ್ತು ಚಾಸಾ-4/ಆರ್.ವಿಜಯ ರವರ ಮೂಲ ಕಲಂ 164 ರ ಹೇಳಿಕೆಗಳು ಹಾಗೂ ಅವುಗಳನ್ನು ಸಲ್ಲಿಸಿಕೊಂಡ ಬಗ್ಗೆ ಕವರ್ ನೋಟ್ ಇರುತ್ತದೆ.

8. ಸಾಕ್ಷಿ ತಾವು ನೀಡಿದ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು **ನಿಪಿ-3** ಮತ್ತು ಸಾಕ್ಷಿಯ ಸಹಿಗಳನ್ನು ನಿಪಿ-3(ಎ) ರಿಂದ 3(ಜಿ) ರವರೆಗೆ ಗುರುತಿಸಲಾಯಿತು. ನಾನು ನನ್ನ ಕಲಂ 164 ರ ಹೇಳಿಕೆಯನ್ನು ಯಾರ ಒತ್ತಾಯವಿಲ್ಲದೇ ಸ್ವತಂತ್ರವಾಗಿ ನೀಡಿದ್ದೇನೆ. ನನ್ನನ್ನು ಈ ದಿನ ಮಂಗಳೂರು ಜಿಲ್ಲಾ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಈ ದಿನ ನನ್ನ ಸ್ವಂತ ಇಚ್ಛೆಯಿಂದ ನ್ಯಾಯಾಲಯದಲ್ಲಿ ಸಾಕ್ಷಿ ನೀಡುತ್ತಿದ್ದೇನೆ. ಆ ದಿನ ಸರ್ಕಾರಕ್ಕೆ ಸೇರಿದ ಹಂಚುಗಳು, ಕೇರಮ್ ಬೋರ್ಡ್ ಹಾಗೂ ಇತರೆ ವಸ್ತುಗಳನ್ನು ಈ ಪ್ರಕರಣದ ಆರೋಪಿಗಳು ಹಾಳು ಮಾಡಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಮುರಿದ ಹಂಚಿನ ತುಂಡುಗಳು, ರೀಪಿನ ಎರಡು ತುಂಡುಗಳು, ಮೂರು

ಪಕಾಸಿನ ತುಂಡುಗಳು ಹಾಗೂ ಮುರಿದ ಬೀಗದ ಕೊಂಡಿಯನ್ನು ಈಗಾಗಲೇ ಕ್ರಮವಾಗಿ ಮು.ಮಾ-1 ರಿಂದ 4 ಎಂದು ಗುರುತಿಸಲಾಗಿರುತ್ತದೆ.

**<u>ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಎನ್.ಎನ್.ಹೆಚ್., ವಕೀಲರಿಂದ.</u>**

ಆರೋಪಿಗಳ ಪರ ವಕೀಲರು ಚಾಸಾ-24 ರವರು ಕಾರಾಗೃಹದ ಅಧೀಕ್ಷಕರಾಗಿರುವ ಕಾರಣ ಹಾಗೂ ಚಾಸಾ-25 ರವರು ಘಟನೆಯ ವೇಳೆಗೆ ಕಾರಾಗೃಹದ ವಾರ್ಡರ್ ಆಗಿದ್ದ ಕಾರಣ, ಅವರುಗಳ ಮುಖ್ಯವಿಚಾರಣೆಯ ನಂತರ ಪಾಟೀಸವಾಲನ್ನು ಮಾಡುವುದಾಗಿ ಕೋರಿದ್ದು, ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ 231(2) ರಡಿಯಲ್ಲಿ ಪಾಟೀಸವಾಲನ್ನು ಒಂದೇ ಬಾರಿಗೆ ಮಾಡಲು ಅವಕಾಶವಿರುವ ಕಾರಣ, ಆರೋಪಿಳ ಪರ ವಕೀಲರ ಮನವಿಯನ್ನು ಪುರಸ್ಕರಿಸಿ, ಪಾಟೀಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.